ಓ.ಎಸ್. ನಂ.335/2023ರಲ್ಲಿ
ಪಿ.ಡಬ್ಲ್ಯೂ-1(ಎಸ್.ಕೃಷ್ಣಮೂರ್ತಿ)

ದಿನಾಂಕ 28-03-2026 ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಖ್ಯ ವಿಚಾರಣೆ ವಾದಿ ಪರ ವಕೀಲರಿಂದಃ-

ನಾನು ವಾದಿಯಾಗಿದ್ದು ಈಗ ಹಾಜರುಪಡಿಸಿದ ಪ್ರಮಾಣ ಪತ್ರವನ್ನು ನನ್ನ ಮುಖ್ಯ ವಿಚಾರಣೆಯನ್ನಾಗಿ ಪರಿಗಣಿಸಲು ಕೋರುತ್ತೇನೆ. ಪ್ರಮಾಣ ಪತ್ರದಲ್ಲಿನ ಎಲ್ಲಾ ಅಂಶಗಳು ಸತ್ಯವಾಗಿವೆ ಮತ್ತು ಅದರಲ್ಲಿ ನನ್ನ ಸಹಿ ಇರುತ್ತದೆ ಎಂದು ಪ್ರಮಾಣೀಕರಿಸುತ್ತೇನೆ.

| | |
|---|---|
| ನಿಪಿ-1 | ಪ್ರತಿವಾದಿ ಬರೆದುಕೊಟ್ಟಿರುವ ನೋಂದಾಯಿತ ಕರಾರು ಪತ್ರ. ನಿಪಿ-1ಕ್ಕೆ ನಾನು ಪ್ರತಿ ಪುಟಕ್ಕೆ ಸಹಿಗಳನ್ನು ಹಾಕಿರುತ್ತೇನೆ. ನಿಪಿ-1ಕ್ಕೆ ಸಾಕ್ಷಿದಾರರಾಗಿ ಶಿವಲಿಂಗೇಗೌಡ ಮತ್ತು ಲೋಕೇಶ್ ರವರು ಸಹಿಗಳನ್ನು ಹಾಕಿರುತ್ತಾರೆ. ನಿಪಿ-1ನ್ನು ಪತ್ರ ಬರಹಗಾರರಾದ ಬೈರಯ್ಯರವರು ಡ್ರಾಫ್ಟ್ ಮಾಡಿರುತ್ತಾರೆ. |
| ನಿಪಿ-1(ಎ) ಯಿಂದ (ಇ) | ಪ್ರತಿವಾದಿಯ ಸಹಿಗಳು |
| ನಿಪಿ-2 | ಗಣಕೀಕೃತ ಪಹಣಿ |
| ನಿಪಿ-3 ಮತ್ತು ನಿಪಿ-4 | ನೋಟಿಸ್‌ನ ಕಛೇರಿ ಪ್ರತಿಗಳು (ಅಂಚೆ ರಶೀದಿಗಳೊಂದಿಗೆ) |
| ನಿಪಿ-5 ಮತ್ತು ನಿಪಿ-6 | ಅಂಚೆ ಸ್ವೀಕೃತಿಗಳು |
| ನಿಪಿ-7 | ಟ್ರ್ಯಾಕ್ ಕನ್ಸೈನ್‌ಮೆಂಟ್ |
| ನಿಪಿ-7 | |
| ನಿಪಿ-8 | |
| ನಿಪಿ-9 | |
| ನಿಪಿ-10 | |

ಮೇಲ್ಕಂಡ ದಾಖಲೆಗಳನ್ನು ಕ್ರಮವಾಗಿ ನಿಪಿ-1 ರಿಂದ ನಿಪಿ-7 ಎಂದು ಗುರುತಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಯನ್ನು ಕೋರಿಕೆಯ ಮೇರೆಗೆ ಮುಂದೂಡಲಾಯಿತು.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

**(ಲೋಕೇಶ)**
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.